ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 344/2024

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿರಿಗೇರಿ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

ನಾಗರಾಜ ಬಿನ್ ಜಂಭಯ್ಯ, ವಃ 45 ವರ್ಷ, ವಾಸಃ ಮಾಟಸೂಗೂರು ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

ದೋಷಾರೋಪಣೆ

ನಾನು ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ದಿನಾಂಕ 12-04-2017 ರಂದು ಮದ್ಯಾಹ್ನ 2.00 ಗಂಟೆ ಸುಮಾರಿಗೆ ಸಿರಿಗೇರಿ ಪೊಲೀಸ್ ಠಾಣಾ ಸರಹದ್ದು ಮಾಟಸೂಗೂರು ಗ್ರಾಮದ ಆಂಜನೇಯ ದೇವಸ್ಥಾನದ ಹತ್ತಿರ ಆರೋಪಿತರಾದ ನೀವು ಉಳಿದ ಆರೋಪಿತರ ಜೊತೆ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಅಕ್ರಮ ಕೂಟದ ಸದಸ್ಯರಾಗಿ ಚಾಸಾ4 ರಿಂದ 6 ರವರೊಂದಿಗೆ ಜಗಳ ತೆಗೆದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 143 **ರ** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಉಳಿದ ಆರೋಪಿತರ ಜೊತೆ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿ ದೊಂಬಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 147 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಉಳಿದ ಆರೋಪಿತರ ಜೊತೆ ಏಕೋದ್ದೇಶದಿಂದ ಕೈಗಳಲ್ಲಿ ಮಾರಕಾಸ್ತ್ರಗಳಾದ ಕಟ್ಟಿಗೆಗಳನ್ನು ಹಿಡಿದುಕೊಂಡು ಬಂದು ಹಲ್ಲೆ ಮಾಡಿ, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 148 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ನಿಮ್ಮಗಳ ಪೈಕಿ 1, 5, 16 ನೇ ಆರೋಪಿತರು ಚಾಸಾ-6 ರವರಿಗೆ ನಾವು ಚರಂಡಿ ಹಾಕಿಸುತ್ತಿರುವ ಕೆಲಸವನ್ನು ನಿಲ್ಲಿಸುತ್ತಿದ್ದೀಯಾ ಏನಲೇ ಸೂಳೇ ಮಗನೇ, ಬೋಸೂಡಿಕೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಅವರಿಗೆ ಉದ್ರೇಕದಿಂದ ಅವರು ಶಾಂತಿ ಭಂಗವನ್ನುಂಟು ಮಾಡಲೆಂಬ ಅಥವಾ

ಇತರ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ದುರ್ಭಾಷೆಗಳಿಂದ ಬೈದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 504 **ಸಹವಾಚಕ** 149 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಸದರಿ ವಿಚಾರವಾಗಿ ನಿಮ್ಮ ಪೈಕಿ 1 ಮತ್ತು 13 ನೇ ಆರೋಪಿತರು ಜಗಳವನ್ನು ಬಿಡಿಸಲು ಹೋದ ಚಾಸಾ-1 ಹಾಗೂ ಚಾಸಾ-4 ರಿಂದ 6 ರವರಿಗೆ ಕಟ್ಟಿಗೆಗಳಿಂದ ಹೊಡೆದು, ಚಾಸಾ-1 ರವರಿಗೆ ಕಟ್ಟಿಗೆಗಳಿಂದ ತಲೆಗೆ, ಬಲ ಭುಜಕ್ಕೆ ಹೊಡೆದು ಸಾದಾರಣ ಸ್ವರೂಪದ ಗಾಯ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 323 **ಸಹವಾಚಕ** 149 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ನಿಮ್ಮಗಳ ಪೈಕಿ 6 ನೇ ಆರೋಪಿತರು ಚಾಸಾ-7 ರವರಿಗೆ ಕಟ್ಟಿಗೆಯಿಂದ ಬಲಕಿವಿ ಹತ್ತಿರ ಹೊಡೆದು ರಕ್ತಗಾಯಪಡಿಸಿದ್ದಲ್ಲದೆ, 8 ನೇ ಆರೋಪಿ ಕಟ್ಟಿಗೆಯಿಂದ ಬೆನ್ನಿಗೆ ಹೊಡೆದು ಸಾದಾರಣ ಸ್ವರೂಪದ ಒಳಪೆಟ್ಟು ಮಾಡಿದ್ದು, ಚಾಸಾ-8 ರವರಿಗೆ 9, 10, 12 ನೇ ಆರೋಪಿತರು ಸೇರಿ ಆತನನ್ನು ನೆಲಕ್ಕೆ ಹಾಕಿ ಕಾಲಿನಿಂದ ಒದ್ದು ಅದರಲ್ಲಿ ಚಂದ್ರಪ್ಪ ಕಟ್ಟಿಗೆಯಿಂದ ಬಲ ಭುಜಕ್ಕೆ ಹೊಡೆದು, 12 ನೇ ಆರೋಪಿಯು ಕಟ್ಟಿಗೆಯಿಂದ ಆತನ ಎಡಕೈಯ ಮಧ್ಯದ ಬೆರಳಿಗೆ ಹೊಡೆದು ಸಾದಾರಣ ಸ್ವರೂಪದ ಪೆಟ್ಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 324 **ಸಹವಾಚಕ** 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ನಿಮ್ಮಗಳ ಪೈಕಿ 1, 2 ಮತ್ತು 16 ರವರು ಚಾಸಾ-9 ರವರ ಸೀರೆಯ ಸೆರಗನ್ನು ಹಿಡಿದು ಎಳೆದಾಡಿ ಕೈಗಳಿಂದ ಕಟ್ಟಿಗೆಯಿಂದ ಹೊಡೆದು ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 354(**ಬಿ**) **ಸಹವಾಚಕ** 149 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರು ಸದರಿ ವಿಚಾರವಾಗಿ ಸಾಕ್ಷಿದಾರರಿಗೆ ಲೇ ಸೂಳೇ ಮಕ್ಕಳೇ ನಿಮ್ಮದು ಇಲ್ಲಿಗೆ ಮುಗಿಯಲಿಲ್ಲ ಪ್ರಾಣ ಸಹಿತ ಬಿಡುವುದಿಲ್ಲ ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ** 506 **ಸಹವಾಚಕ** 149 **ರ** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

(ಅಶೋಕ್ ಆರ್.ಹೆಚ್.)

ದಿನಾಂಕಃ 08.05.2026 ಪ್ರ.ದ.ನ್ಯಾ.ದಂ.,ಸಿರುಗುಪ್ಪ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 344/2024

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್
ಪೊಲೀಸ್, ಸಿರಿಗೇರಿ ಪೊಲೀಸ್ ಠಾಣೆ.

-ವಿರುದ್ಧ–

**ಆರೋಪಿತರು :**

ನಾಗರಾಜ ಬಿನ್ ಜಂಭಯ್ಯ, ವಃ 45 ವರ್ಷ, ವಾಸಃ ಮಾಟಸೂಗೂರು ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

**ಆರೋಪಣೆ**

ಪ್ರಶ್ನೆ : ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ

ಪ್ರಶ್ನೆ : ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿತರಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).

**ದಿನಾಂಕಃ** 08.05.2026. **ಪ್ರ. ದ. ನ್ಯಾ. ದಂ., ಸಿರುಗುಪ್ಪ.**